ಕರ್ನಾಟಕ ಸರ್ಕಾರ

ಸಂಖ್ಯೆ:ಪಪೂಶಿಇ/ಸಿ-2/ಬಿಇಡಿ/206/11-12(ಭಾಗ-2)

ನಿರ್ದೇಶಕರ ಕಛೇರಿ,
ಪದವಿ ಪೂರ್ವ ಶಿಕ್ಷಣ ಇಲಾಖೆ,
ಮಲ್ಲೇಶ್ವರಂ, 18ನೇ ಅಡ್ಡರಸ್ತೆ,
ಬೆಂಗಳೂರು-560012.
ದಿನಾಂಕ: 15-04-2017.

## ಸುತ್ತೋಲೆ

ವಿಷಯ: 2013ನೇ ಸಾಲಿನಲ್ಲಿ ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ಉಪನ್ಯಾಸಕರಾಗಿ ನೇಮಕಗೊಂಡು ಬಿ.ಇಡಿ ಪದವಿಯನ್ನು ಹೊಂದಲು ದಾಖಲಾದ ಎಲ್ಲಾ ಉಪನ್ಯಾಸಕರುಗಳನ್ನು ಬಿ.ಇಡಿ ತರಗತಿಗೆ ಹಾಜರಾಗಲು ಉಪನ್ಯಾಸಕರ ಕರ್ತವ್ಯದಿಂದ ಬಿಡುಗಡೆಗೊಳಿಸುವ ಬಗ್ಗೆ.

ಉಲ್ಲೇಖ: 1. ಸರ್ಕಾರದ ಪತ್ರ ಸಂಖ್ಯೆ: 189 ಟಿಪಿಯು 2015 ದಿನಾಂಕ 28-12-2016.
2. ಈ ಕಛೇರಿ ಸಮ ಸಂಖ್ಯೆ ಸುತ್ತೋಲೆ ದಿನಾಂಕ 29-12-2016.

****

ರಾಜ್ಯದ ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ಖಾಲಿ ಇದ್ದ ಉಪನ್ಯಾಸಕ ಹುದ್ದೆಗಳಲ್ಲಿ 2013ನೇ ಸಾಲಿನಲ್ಲಿ ನೇಮಕಗೊಂಡ 1763 ಉಪನ್ಯಾಸಕರ ಪೈಕಿ ಬಿ.ಇಡಿ ಪದವಿಯನ್ನು ಹೊಂದದ ಉಪನ್ಯಾಸಕರಿಗೆ ಬಿ.ಇಡಿ ಪ್ರವೇಶ ಪಡೆದು ಪದವಿಯನ್ನು ಹೊಂದಲು ಅವಕಾಶ ಕಲ್ಪಿಸಲಾಗಿತ್ತು. ಅದರಂತೆ ಉಲ್ಲೇಖ-2ರ ಈ ಕಛೇರಿ ಸುತ್ತೋಲೆ ಮೂಲಕ ಸರ್ಕಾರದ ನಿರ್ದೇಶನದಂತೆ ಬಿ.ಇಡಿ ಪದವಿಯನ್ನು ಪಡೆಯದ ಉಪನ್ಯಾಸಕರುಗಳಿಗೆ ಬಿ.ಇಡಿ ಪದವಿಗೆ ಅರ್ಜಿ ಸಲ್ಲಿಸಿ ಪ್ರವೇಶ ಪಡೆದು ಸದರಿ ಕೋರ್ಸಿಗೆ ದಾಖಲಾಗಲು ಸೂಚಿಸಲಾಗಿತ್ತು.

ಉಲ್ಲೇಖ-2ರ ಸುತ್ತೋಲೆ ಅನ್ವಯ ಬಿ.ಇಡಿ ಪದವಿಯನ್ನು ಹೊಂದದ ಉಪನ್ಯಾಸಕರು ಬಿ.ಇಡಿ ಪದವಿಗೆ ಅರ್ಜಿ ಸಲ್ಲಿಸಿ, ಪ್ರವೇಶ ಪಡೆದಂತಹ ಎಲ್ಲಾ ಉಪನ್ಯಾಸಕರುಗಳು ನಿಯಮಾನುಸಾರ ದಾಖಲಾತಿಯಾದ ಕಾಲೇಜಿನ ತರಗತಿಗಳಿಗೆ ಹಾಜರಾಗಬೇಕಾಗುತ್ತದೆ. ಈ ಹಿನ್ನೆಲೆಯಲ್ಲಿ ಸಂಬಂಧಪಟ್ಟ ಎಲ್ಲಾ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲರು ತಮ್ಮ ಕಾಲೇಜಿನಲ್ಲಿ ಬಿ.ಇಡಿ ಪದವಿಯನ್ನು ಪಡೆಯದ ಉಪನ್ಯಾಸಕರೆಲ್ಲರೂ ಅರ್ಜಿ ಸಲ್ಲಿಸಿ, ಸದರಿ ಕೋರ್ಸಿಗೆ ದಾಖಲಾತಿಯಾಗಿರುವ ಬಗ್ಗೆ ಖಚಿತ ಪಡಿಸಿಕೊಂಡು ಉಪನ್ಯಾಸಕರನ್ನು ಕರ್ತವ್ಯದಿಂದ ಬಿಡುಗಡೆ ಮಾಡಿ ದಾಖಲಾತಿಗೊಂಡ ಕಾಲೇಜಿನ ತರಗತಿಗಳಿಗೆ ಹಾಜರಾಗಲು ತಿಳಿಸುವಂತೆ ಸಂಬಂಧಿಸಿದ ಕಾಲೇಜಿನ ಎಲ್ಲಾ ಪ್ರಾಂಶುಪಾಲರಿಗೆ ಈ ಮೂಲಕ ಸೂಚಿಸಿದೆ.

ಬಿ.ಇಡಿ ಪದವಿಗೆ ದಾಖಲಾದ ಪ್ರತಿ ಉಪನ್ಯಾಸಕರು ಸದರಿ ಕಾಲೇಜಿನ ತರಗತಿಗಳಿಗೆ ಹಾಜರಾಗಿರುವ ಬಗ್ಗೆ ಪ್ರತಿ ತಿಂಗಳು ಮಾಹಿತಿಯನ್ನು ಸಂಗ್ರಹಿಸಿ ಸಂಬಂಧಪಟ್ಟ ಜಿಲ್ಲಾ ಉಪನಿರ್ದೇಶಕರಿಗೆ ವರದಿ ನೀಡುವುದು.

15/4/17
ನಿರ್ದೇಶಕರು
ಪದವಿ ಪೂರ್ವ ಶಿಕ್ಷಣ ಇಲಾಖೆ.

ಪ್ರತಿಗಳು:

1. ನಿರ್ದೇಶಕರ ಆಪ್ತ ಶಾಖೆ, ಪಪೂಶಿಇ, ಮಲ್ಲೇಶ್ವರಂ, ಬೆಂಗಳೂರು.
2. ಜಂಟಿ ನಿರ್ದೇಶಕರು/ಉಪ ನಿರ್ದೇಶಕರು/ಸಹಾಯಕ ನಿರ್ದೇಶಕರು (ಆಡಳಿತ) ಪಪೂಶಿಇ, ಮಲ್ಲೇಶ್ವರಂ, ಬೆಂಗಳೂರು-ಇವರಿಗೆ ಮಾಹಿತಿಗಾಗಿ.
3. ಸಹಾಯಕ ನಿರ್ದೇಶಕರು, ಇ-ಆಡಳಿತ ಶಾಖೆ, ಪಪೂಶಿಇ, ಮಲ್ಲೇಶ್ವರಂ, ಬೆಂಗಳೂರು-ಇಲಾಖಾ ಅಂತರ್ಜಾಲದಲ್ಲಿ ಅಳವಡಿಸಲು.
4. ರಾಜ್ಯದ ಪದವಿ ಪೂರ್ವ ಶಿಕ್ಷಣ ಇಲಾಖೆಯ ಎಲ್ಲಾ ಜಿಲ್ಲಾ ಉಪ ನಿರ್ದೇಶಕರುಗಳಿಗೆ.
5. ಸಂಬಂಧಪಟ್ಟ ರಾಜ್ಯದ ಎಲ್ಲಾ ಸರ್ಕಾರಿ ಪದವಿ ಪೂರ್ವ ಕಾಲೇಜುಗಳ ಪ್ರಾಂಶುಪಾಲರಿಗೆ-ಮುಂದಿನ ಕ್ರಮಕ್ಕಾಗಿ.
6. ಕಚೇರಿ ಪ್ರತಿ.